## ಗೊಂದಲಿಗರ ಹಾಡಿಗೆ ಚಂದನದ ಸೊಬಗು

ಗೊಂದಲಿಗರ ಹಾಡಿನ ಪ್ರಮುಖ ಜನಪದ ಕಲಾವಿದ ವೆಂಕಟಪ್ಪ ಅಂಬಾಜಿ ಸುಗತೇಕರ್ ಪದ್ಮಶ್ರೀ ಪುರಸ್ಕಾರವನ್ನು ಪಡೆದಿದ್ದಾರೆ. ಅವರನ್ನು 'ವಾರದ ಅತಿಥಿ' ಕಾರ್ಯಕ್ರಮದಲ್ಲಿ ಚಂದನ ಅರ್ಥಪೂರ್ಣವಾಗಿ ಪರಿಚಯಿಸಿತು. ಭಾರತದ ಅನೇಕ ಕಡೆ ಅವರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವರ ಮಕ್ಕಳು, ಮೊಮ್ಮಕ್ಕಳು ಈ ಕಲೆಯನ್ನು ಮುಂದುವರಿಸುತ್ತಿರುವುದು ಸಂತೋಷದ ಸಂಗತಿ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ರಂಗದಲ್ಲಿ ಮೆರೆದ ಪುರಾಣ, ಮಹಾಕಾವ್ಯ

ಭಕ್ತಿ ಹಾಗೂ ಪೌರಾಣಿಕ ಮಹಿಮೆಯ ದೃಶ್ಯ ಕಾವ್ಯ ಝೀ ಕನ್ನಡದ 'ಮಹಾನಟಿ' ಶೋನಲ್ಲಿ ಅನಾವರಣವಾಯಿತು. ಕಾರ್ಯಕ್ರಮ ವಿಶೇಷತೆಯಿಂದ ಕೂಡಿತ್ತು. ಪ್ರೇಕ್ಷಕರನ್ನು ಭಕ್ತಿಭಾವದಿಂದ ಮೈ ಮರೆಯುವಂತೆ ಮಾಡಿತು. ಸ್ಪರ್ಧಿಗಳ ಜೊತೆ ಕಿರುತೆರೆ ಕಲಾವಿದರು ಅದ್ಭುತವಾಗಿ ನಟಿಸಿದರು. ಗೌರಿ–ಗಣೇಶ, ರಾಮ–ಸೀತೆ, ರಾಘವೇಂದ್ರ ಸ್ವಾಮಿ ಕೃಪಾ ಕಟಾಕ್ಷ ಸನ್ನಿವೇಶ, ಬುದ್ಧನ ಕಥೆ, ಊರ್ಮಿಳೆಯ ವಿರಹ, ಚಾಮುಂಡೇಶ್ವರಿಯ ವೈಭವ, ಮಂಜುನಾಥ ಮಹಿಮೆ, ವೆಂಕಟೇಶ್ವರನ ಕಥಾರೂಪ, ದ್ರೌಪದಿಯ ವಸ್ತ್ರಾಪಹರಣ ಚೆನ್ನಾಗಿ ಮೂಡಿಬಂತು. ಅಭಿನಯಕ್ಕೆ ಪೂರಕವಾಗಿ ತಾಂತ್ರಿಕ ಕೌಶಲ್ಯ, ರಂಗುರಂಗಿನ ವೇದಿಕೆ, ವಸ್ತ್ರ ವಿನ್ಯಾಸ ಎಲ್ಲವೂ ಕಾರ್ಯಕ್ರಮದ ಅಂದವನ್ನು ಹೆಚ್ಚಿಸಿದವು.

—ಭಾರತೀ ಗಂಗಾಧರ್, ಬೆಂಗಳೂರು

## ಸಂತೋಷಕ್ಕೆ ಇಷ್ಟು ಸಾಕು

ಝೀ ಕನ್ನಡದ 'ನಾವು ನಮ್ಮವರು' ಕಾರ್ಯಕ್ರಮದಲ್ಲಿ ಪ್ರಿಯಾ ದಂಪತಿ ಸಾಗರದ ಸಮೀಪದ ತಮ್ಮ ಅಜ್ಜಿ ಮನೆಗೆ ಹೋಗಿದ್ದು, ಕೆಸರು ಗದ್ದೆಯಲ್ಲಿ ತಮ್ಮ ಬಂಧು ಬಳಗದ ಜೊತೆ ಆಟ ಆಡಿದ್ದು, ಮಲೆನಾಡಿನ ಖಾದ್ಯ ಸವಿದ ಚಿತ್ರಣ ಖುಷಿ ಅನಿಸಿತು. ವೇಗದ ಜೀವನದಲ್ಲಿ ಈ ರೀತಿಯ ಸಣ್ಣಪುಟ್ಟ ವಿಷಯಗಳಲ್ಲಿ ಸಂತೋಷ ಕಂಡುಕೊಳ್ಳುವುದನ್ನು ನಾವು ಮರೆತಿರುವುದು ವಿಷಾದಕರ ಎಂಬ ಮಾತನ್ನು ನಿರೂಪಕ ನಿರಂಜನ ದೇಶಪಾಂಡೆ ಹೇಳಿದ್ದು ಬಹುಪಾಲು ಸತ್ಯ. ಉತ್ತಮ ಸಂಬಂಧಗಳನ್ನು ಬೆಸೆಯುವ ಈ ರೀತಿಯ ಕಾರ್ಯಕ್ರಮಗಳು ವೀಕ್ಷಕರಿಗೂ ಆಪ್ತ ಆಗುತ್ತಿವೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ವಾರದ ಪತ್ರ

## ಸಂಪನ್ಮೂಲವೇ ಇಲ್ಲಿ ಕಸ

ಚಂದನದ 'ಶುಭೋದಯ ಕರ್ನಾಟಕ'ದಲ್ಲಿ ಯುವ ಸಾಹಿತಿ ದಾದಾಪೀರ್ ಜೈಮನ್ ಅವರ ಸಂದರ್ಶನ ಪ್ರಸಾರವಾಯಿತು. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಸಾಹಿತ್ಯ ಪುರಸ್ಕಾರಕ್ಕೆ ಪಾತ್ರವಾಗಿದ್ದಾರೆ.

ಜೈಮನ್ ಓದಿದ್ದು ಎಂಎಸ್ಸಿ ಗಣಿತ. ಒತ್ತಾಸೆಯಿಂದ ಸಾಹಿತಿಯಾದ ವಿವರವನ್ನು ನೀಡಿದ್ದು ಚೆನ್ನಾಗಿತ್ತು. ಮನಸ್ಸು ಮಾಡಿದರೆ ಎಲ್ಲರೂ ಸಾಧನೆಯನ್ನು ಮಾಡಬಹುದು ಎನ್ನುವುದು ಸುಳ್ಳಲ್ಲ. ಸಂದರ್ಶನ ಆರಂಭದಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ಅವರ 'ಪ್ರಶ್ನೆ ಮಾಡದಿರುವ ಮತ್ತು ಪ್ರತಿಭಟನೆ ಮಾಡದಿರುವ ಮನಸ್ಸುಗಳೆ ನಿಜವಾದ ಕಸ' ಎಂಬ ಹೇಳಿಕೆ ತುಂಬ ಪ್ರಸ್ತುತ ಅನ್ನಿಸಿತು. ನಮ್ಮಲ್ಲಿ ಮಾನವ ಸಂಪನ್ಮೂಲಕ್ಕೆ ಕೊರತೆ ಇಲ್ಲ. ಆದರೆ ಪ್ರಶ್ನೆ ಮಾಡುವ, ಪ್ರತಿರೋಧ ಮಾಡುವ ಆತ್ಮಸಾಕ್ಷಿಯಿಲ್ಲದೆ ಇರುವ ಸಂಪನ್ಮೂಲ ಕಸವಾಗುತ್ತಿದೆ.

—ಮಲ್ಲಿಕಾರ್ಜುನ ಸುರಧೇನುಪುರ

## ಅನುಕರಣೆ ತಪ್ಪಲಿ ಸ್ವಂತಿಕೆ ಮೆರೆಯಲಿ

ಝೀ ಕನ್ನಡದ 'ಮಹಾನಟಿ'ಯಲ್ಲಿ ಮಂಗಳೂರಿನ ವಂಶಿ ನಟಿಸಿದ ಸ್ಕಿಟ್ ತುಂಬಾ ಚೆನ್ನಾಗಿತ್ತು. ಅಂಗವಿಕಲರು ತಮ್ಮ ಕುಟುಂಬದಲ್ಲೂ ಎಂತಹ ಸ್ಪಂದನೆಯನ್ನು ಪಡೆಯುತ್ತಾರೆ ಎನ್ನುವುದನ್ನು ಅದು ತೋರಿಸಿತು. ಸಮಾಜ ಈ ಬಗ್ಗೆ ಅರಿಯುವ ಅಗತ್ಯವನ್ನು ಅದು ಒತ್ತಿ ಹೇಳಿದಂತೆ ಇತ್ತು. ಸ್ಪರ್ಧೆಯಲ್ಲಿ ಯಾವುದೋ ಸಿನಿಮಾ ದೃಶ್ಯಕ್ಕೆ ಅಭಿನಯಿಸುವ ಬದಲು ಈ ರೀತಿಯ ಸಮಾಜಮುಖಿ ವಿಷಯಗಳನ್ನು ತೆಗೆದುಕೊಂಡು ಕಲಾತ್ಮಕವಾಗಿ ಕಟ್ಟುವುದು ಹೆಚ್ಚು ಮುಖ್ಯ. ಆಗ ಅಭಿನಯದಲ್ಲಿ ಸ್ವಂತಿಕೆಯನ್ನು ಮೆರೆಯಬಹುದು. ಸಿನಿಮಾ ಸೀನ್ ನೋಡಿ ಕಾಪಿ ಮಾಡಿದಾಗ ಅಭಿನಯದಲ್ಲೂ ಅನುಕರಣೆ ಎದ್ದು ಕಾಣಿಸುತ್ತದೆ.

—ಶರದ ಕುಲಕರ್ಣಿ, ಬೀದರ್

## ರಾಘವೇಂದ್ರ ಮಹಾತ್ಮೆಯಲ್ಲಿ ಭಕ್ತಿಯ ರಸದೌತಣ



ಝೀ ಕನ್ನಡದಲ್ಲಿ ಪೌರಾಣಿಕ ಧಾರಾವಾಹಿ 'ಶ್ರೀರಾಘವೇಂದ್ರ ಮಹಾತ್ಮೆ' ಈಗ ಆರಂಭವಾಗಿದೆ. ನವೀನ್ ಕೃಷ್ಣ ಇದನ್ನು ನಿರ್ದೇಶಿಸಿದ್ದಾರೆ. ಭಕ್ತಿ ಪ್ರಧಾನ ಈ ಕಥೆಯಲ್ಲಿ ದೇವಲೋಕ, ಭೂಲೋಕ ಅದ್ದೂರಿ ದೃಶ್ಯಗಳಿಂದ ಕಣ್ಮನ ಸೆಳೆಯುತ್ತದೆ. ತಾಂತ್ರಿಕ ಕೌಶಲ್ಯವನ್ನು ಅಳವಡಿಸಿಕೊಂಡಿರುವ ಈ ಧಾರಾವಾಹಿ ವೀಕ್ಷಕರನ್ನು ಮಂತ್ರಮುಗ್ಧಗೊಳಿಸಿದೆ. ಖಳನಾಯಕ–ಖಳನಾಯಕಿಯರ ದುಷ್ಟ ಕೃತ್ಯಗಳಿಂದ ಬೇಸತ್ತಿರುವವರಿಗೆ ಈ ಧಾರಾವಾಹಿ ಭಕ್ತಿರಸದ ಔತಣ ಉಣಬಡಿಸುತ್ತಿದೆ.

—ರಮಣ್ ಶೆಟ್ಟಿ ರೆಂಜಾಳ, ಮುಂಬಯಿ

## ಬುರುಡೆ ಪುರಾಣಕ್ಕೆ ಈ ಮುಸುಕು

ಬುರುಡೆ ಅನ್ನೋ ಪದ ಇತ್ತೀಚೆಗೆ ಹೆಚ್ಚು ಮುನ್ನೆಲೆಗೆ ಬಂದಿದೆ. ಕಳೆದ ಒಂದೆರಡು ತಿಂಗಳಿನಿಂದ ನಮ್ಮ ಸುದ್ದಿ ವಾಹಿನಿಗಳ ಬುರುಡೆ ಪುರಾಣ ಕೇಳಿ ಕೇಳಿ ತಲೆ ಬುರುಡೆಯೇ ಕೆಟ್ಟಂತೆ ಆಗಿದೆ. ಬಗೆ ಬಗೆಯ ಪದ ಪುಂಜಗಳಿಂದ ಬಣ್ಣಿಸುತ್ತಾ ಬುರುಡೆ ಭಿನ್ನ ರೂಪವನ್ನು ದಿನವೂ ತಳೆಯುತ್ತಲೇ ಇದೆ.

'ತಾಳಕ್ಕೆ ತಕ್ಕಂತೆ ಮೇಳ' ಅನ್ನೋ ಹಾಗೇ ಅನೇಕರು ಪರಸ್ಪರ ತಮ್ಮ ತಮ್ಮದೇ ಆದ ಧಾಟಿಯಲ್ಲಿ ನಾವೇನು ಕಮ್ಮಿ ಎಂದು ಬುರುಡೆಯ ಒಳಗೆ ಮತ್ತು ಹೊರಗೂ ಮಸಾಲೆ ಸೇರಿಸಿ ಬುರುಡಾ ಪ್ರವೀಣರಾಗಿಯೇ ಹೋದರು. ಬುರುಡೆ ಪುರಾಣದಿಂದ ಪಾರಾಗಲು ಒಮ್ಮೊಮ್ಮೆ ನಮ್ಮ ಟೀವಿ ಸ್ಕ್ರೀನಿಗೆ ಮುಸುಕು ಹಾಕಬೇಕು ಎಂದು ಅನಿಸಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## 'ದೃಷ್ಟಿ'ಯಲ್ಲಿ ಉತ್ತರವೇ ಸಿಗದ ಪ್ರಶ್ನೆಗಳು

ಸ್ಟಾರ್ ಪ್ಲಸ್‌ನ 'ನಜರ್' ಕನ್ನಡಕ್ಕೆ ಡಬ್ ಮಾಡಿ ಸ್ಟಾರ್ ಸುವರ್ಣದಲ್ಲಿ 'ದೃಷ್ಟಿ' ಎಂದು ಪ್ರಸಾರ ಮಾಡುತ್ತಿದ್ದಾರೆ. ಇದರಲ್ಲಿ ಉತ್ತರವಿಲ್ಲದ ಹಲವಾರು ಪ್ರಶ್ನೆಗಳಿವೆ. ಇದರಲ್ಲಿ ಮೋಹಿನಿ ಒಬ್ಬಳಿದ್ದಾಳೆ. ಅವಳು 200 ವರ್ಷಗಳಿಂದ ಜೀವಿಸಿದ್ದಾಳೆ. ಅವಳು ಮನುಷ್ಯರ ಆಯಸ್ಸನ್ನು ಹೀರಿ ಬದುಕುತ್ತಾಳೆ. ಆದರೆ ಅವಳ ತಂಗಿ ವೇದಶ್ರೀ, ಮೋಹಿನಿಯಲ್ಲ. ಹಾಗಾದರೆ ಅವಳಿಗೂ ಇನ್ನೂರು ವರ್ಷಗಳಾಗಿವೆಯೇ? ಮಾಟಗಾತಿ ದಿಲ್ರುಬಾ ವೇಷ ಬದಲಿಸಿ ಪಿಯಾಳ ರೂಪದಲ್ಲಿ ಮನೆಗೆ ಬಂದು ನಿಜವಾದ ಪಿಯಾಳ ದೇಹ ಬಿಟ್ಟು ಹೋಗುತ್ತಾಳೆ. ನಿಶಾಂತ್ ಪಿಯಾಳನ್ನು ಮಾಟಗಾತಿ ಎಂದುಕೊಂಡು ಬಾಣ ಬಿಟ್ಟಾಗ ಅಂಶ್ ಅಡ್ಡ ನಿಲ್ಲುತ್ತಾನೆ. ಆದರೆ ರೂಬಿಗೆ ಬಾಣ ತಾಗಿ ಪ್ರಾಣ ತ್ಯಾಗ ಮಾಡುತ್ತಾಳೆ. ಪಾತ್ರವನ್ನು ಮುಗಿಸಲೆಂದೇ ಈ ರೀತಿ ಮಾಡಿದರೇ? ಗೊತ್ತಿಲ್ಲ.

—ವಾಸುಕಿ, ತೀರ್ಥಹಳ್ಳಿ